ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**502**
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ ಎಂ.ಎ ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	10.03.2020
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಇರುವ ಮಾನದಂಡಗಳೇನು; ಹಾಸನ ಜಿಲ್ಲೆಯಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು; ಮತ್ತು ಈ ಅಂಗಡಿಗಳು ಯಾರ ಹೆಸರಿನಲ್ಲಿ ಪ್ರಾರಂಭವಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)	ಹೊಸ ನ್ಯಾಯಬೆಲೆ ಅಂಗಡಿಗಳಿಗೆ ಅರ್ಜಿ ಸಲ್ಲಿಸಲು ಕರ್ನಾಟಕ ಅಗತ್ಯ ವಸ್ತುಗಳ (ಸಾವಿಪ) ನಿಯಂತ್ರಣ ತಿದ್ದುಪಡಿ ಆದೇಶ ದಿನಾಂಕ: 21-05-2018ರಂತೆ ಕೆಳಕಂಡಂತೆ ಆದ್ಯತೆ ನೀಡಲಾಗಿರುತ್ತದೆ. ಎ) ಸರ್ಕಾರದ ನಿಗಮಗಳು/ಗ್ರಾಮ ಪಂಚಾಯಿತಿ/ಸ್ಥಳೀಯ ನಗರ ಸಂಸ್ಥೆಗಳು ಬಿ) ಸಹಕಾರ ಸಂಘಗಳು. ~~1. ಟಿಎಪಿಸಿಎಂಎಸ್/ಕೋ-ಅಪರೇಟಿವ್ ಮಾರ್ಕೆಂಟಿಂಗ್ ಸೊಸೈಟಿಗಳು.~~ 2. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು/ ವಿ.ಎಸ್.ಎಸ್.ಎನ್ 3. ಹಾಫ್ ಕಾಮ್ಸ್ 4. ಅಧಿಕೃತ ನೋಂದಣಿಯಾದ ಸಹಕಾರ ಸಂಘಗಳು 5. ಅಧಿಕೃತ ನೋಂದಣಿಯಾದ ಪ್ರಾಥಮಿಕ ಬಳಕೆದಾರರ ಸಹಕಾರ ಸಂಘಗಳು 6. ನೋಂದಣಿಯಾದ ಆದಿವಾಸಿ ವಿವಿದೋದ್ದೇಶ ಸಹಕಾರ ಸಂಘಗಳು. 7. ನೋಂದಣಿಯಾದ ನೇಕಾರರ ಸಹಕಾರ ಸಂಘಗಳು 8. ನೋಂದಣಿಯಾದ ಮಹಿಳಾ ವಿವಿದೋದ್ದೇಶ ಸಹಕಾರ ಸಂಘಗಳು 9. ನೋಂದಣಿಯಾದ ವಿವಿದೋದ್ದೇಶ ಸಹಕಾರ ಸಂಘಗಳು 10. ಅಂಗವಿಕಲರ ಕಲ್ಯಾಣ ಸಹಕಾರ ಸಂಘಗಳು 11. ಸಹಕಾರ ಸಂಘಗಳು ನಡೆಸುವ ಬ್ಯಾಂಕ್ ಅಥವಾ ಕೋ-ಆಪರೇಟಿವ್ ಬ್ಯಾಂಕುಗಳು. ಸಿ) ಖಾಸಗಿ-ವಿಕಲಚೇತನರ ವರ್ಗBench mark disability (ಪ್ರಾರಂಭಿಕವಾಗಿ 400 ನ್ಯಾಯಬೆಲೆ ಅಂಗಡಿಗಳು) ಮತ್ತು ಮಂಗಳಮುಖಿಯರ ವರ್ಗ (ಪ್ರಾರಂಭಿಕವಾಗಿ 30 ನ್ಯಾಯಬೆಲೆ ಅಂಗಡಿಗಳು) ಮೇಲ್ಕಂಡ ಸಹಕಾರ ಸಂಘಗಳ ಗುಣಮಟ್ಟವನ್ನು ಅವರಿಗೆ ನೀಡಲಾಗಿರುವ ಆಡಿಟ್ ವರದಿಯ ಮೇಲೆ ಪರಿಗಣಿಸಲಾಗುವುದು ಮತ್ತು ಸದರಿ ಸಹಕಾರ ಸಂಘಗಳು 03 ವರ್ಷಗಳಿಗಿಂತ ಹಿಂದಿನವುಗಳಾಗಿರಬೇಕು ಹಾಗೂ ಕಳೆದ 2 ವರ್ಷಗಳಿಂದ ನಿರಂತರವಾಗಿ ರೂ.200000/-ದಷ್ಟು ಮೊತ್ತದ ಬ್ಯಾಂಕ್ ಬ್ಯಾಲೆನ್ಸ್ ಹೊಂದಿರಬೇಕು. ಎರಡು ತಿಂಗಳ ಪಡಿತರ ಹಂಚಿಕೆಯ ಆಹಾರಧಾನ್ಯ ಪ್ರಮಾಣವನ್ನು ಶೇಖರಿಸಿಡಲು ಸಾಕಷ್ಟು ಸಂಗ್ರಹಣಾ ಸಾಮರ್ಥ್ಯದ ಮಳಿಗೆ ಜಾಗವನ್ನು

<table>
<tr><td></td><td></td><td>ಕೂಡ ಹೊಂದಿರಬೇಕು.
ಹಾಸನ ಜಿಲ್ಲೆಯಲ್ಲಿ ಒಟ್ಟು 873 ನ್ಯಾಯಬೆಲೆ ಅಂಗಡಿಗಳು ಇವೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರಸಂ</th><th>ತಾಲ್ಲೂಕು</th><th>ಸಹಕಾರ ಸಂಘಗಳು</th><th>ಸಂಘಗಳು</th><th>ಖಾಸಗಿ ವ್ಯಕ್ತಿಗಳು</th><th>ಒಟ್ಟು</th></tr>
<tr><td>1</td><td>ಆಲೂರು</td><td>13</td><td>5</td><td>26</td><td>44</td></tr>
<tr><td>2</td><td>ಅರಕಲಗೂಡು</td><td>11</td><td>14</td><td>61</td><td>86</td></tr>
<tr><td>3</td><td>ಅರಸೀಕೆರೆ</td><td>20</td><td>33</td><td>153</td><td>206</td></tr>
<tr><td>4</td><td>ಬೇಲೂರು</td><td>24</td><td>10</td><td>52</td><td>86</td></tr>
<tr><td>5</td><td>ಚನ್ನರಾಯಪಟ್ಟಣ</td><td>35</td><td>24</td><td>43</td><td>102</td></tr>
<tr><td>6</td><td>ಹಾಸನ</td><td>47</td><td>30</td><td>93</td><td>170</td></tr>
<tr><td>7</td><td>ಹೊಳೆನರಸೀಪುರ</td><td>18</td><td>1</td><td>99</td><td>118</td></tr>
<tr><td>8</td><td>ಸಕಲೇಶಪುರ</td><td>11</td><td>14</td><td>36</td><td>61</td></tr>
<tr><td colspan="2">——</td><td>179</td><td>131</td><td>563</td><td>873</td></tr>
</table>
ಹಾಸನ ಜಿಲ್ಲೆಯಲ್ಲಿರುವ ತಾಲ್ಲೂಕುವಾರು ನ್ಯಾಯಬೆಲೆ ಅಂಗಡಿಗಳ ಹೆಸರು ಹಾಗೂ ಅವುಗಳ ಪ್ರಾಧಿಕರಣದಾರರ ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.</td></tr>
<tr><td>ಆ</td><td>ನ್ಯಾಯಬೆಲೆ ಅಂಗಡಿಯನ್ನು ಹೊಂದಿರುವವರು ಮರಣ ಹೊಂದಿದಲ್ಲಿ ಅವರು ನಡೆಸುತ್ತಿರುವ ಅಂಗಡಿಯನ್ನು ಅವರ ವಾರಸುದಾರರಿಗೆ ನೀಡಲು ಅವಕಾಶವಿದೆಯೇ; (ಮಾಹಿತಿ ನೀಡುವುದು)</td><td>ಅವಕಾಶವಿದೆ.
ಕರ್ನಾಟಕ ಅಗತ್ಯ ವಸ್ತುಗಳ ಕಾಯ್ದೆಯ ನಿಯಂತ್ರಣಾ ಆದೇಶ 2016 ರ ಕಲಂ 13ರಲ್ಲಿ ಈ ಕೆಳಕಂಡ ಮಾನದಂಡಗಳನ್ನು ನಿಗಧಿಪಡಿಸಲಾಗಿದೆ.
1. ಪ್ರಾಧಿಕಾರರ ಹೊಂದಿರುವವರು ಮೃತಪಟ್ಟ ಸಂದರ್ಭದಲ್ಲಿ 65 ವರ್ಷ ಮೀರಿರಬಾರದು.
2. ಅನುಕಂಪದ ಆಧಾರದ ಅರ್ಜಿ ಮೃತಪಟ್ಟ ದಿನಾಂಕದ 90 ದಿನಗಳೊಳಗಾಗಿ ಸಲ್ಲಿಸಬೇಕು.
3. ಮೃತರ ಮಗಳು/ಮಗ 18 ವರ್ಷ ಮೇಲ್ಪಟ್ಟ ವಯಸ್ಸಿನವರಾಗಿರಬೇಕು ಹಾಗೂ ಮಗ 30ವರ್ಷದ ಒಳಗಿರತಕ್ಕದ್ದು. ಅವಿವಾಹಿತ ಮಗಳು 40 ವರ್ಷದ ಒಳಗಿರತಕ್ಕದ್ದು. ಪತಿ/ಪತ್ನಿ 65 ವರ್ಷ ಮೀರಿರಬಾರದು.
4. ಕನಿಷ್ಠ ವಿದ್ಯಾರ್ಹತೆ 10ನೇ ತರಗತಿ ಉತ್ತೀರ್ಣ.
ಅನುಕಂಪದ ಆಧಾರದ ಮೇಲೆ ನೀಡುವ ಪ್ರಾಧಿಕರಣದ ಅವಧಿ 3 ವರ್ಷಗಳು ಮಾತ್ರ.</td></tr>
<tr><td>ಇ</td><td>ನ್ಯಾಯಬೆಲೆ ಅಂಗಡಿಯ ಮಾಲೀಕರು ಸರ್ಕಾರ ನಿಗಧಿಪಡಿಸಿರುವ ಪ್ರಮಾಣದ ದಿನಸಿ ಸಾಮಾಗ್ರಿಗಳನ್ನು ಎಪಿಎಲ್ ಮತ್ತು ಬಿಪಿಎಲ್ ಕಾರ್ಡ್‌ದಾರರಿಗೆ</td><td>1. ಕೇಂದ್ರೀಕೃತವಾಗಿ ಆಯುಕ್ತರ ಕಛೇರಿಯಿಂದಲೇ ಆನ್‌ಲೈನ್‌ನಲ್ಲಿ ಮಾಹೆವಾರು, ತಾಲ್ಲೂಕುವಾರು, ಗೋದಾಮುವಾರು ಪಡಿತರ ಚೀಟಿಗಳಿಗೆ ಪಡಿತರ ಹಂಚಿಕೆ ನೀಡಲಾಗುತ್ತಿದೆ.</td></tr>
</table>

	ವಿತರಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಯಾವ ಮಾನದಂಡಗಳನ್ನು ಅನುಸರಿಸುತ್ತಿದೆ; (ಮಾಹಿತಿ ನೀಡುವುದು)	2. ಆನ್‌ಲೈನ್‌ನಲ್ಲಿ ಪಡಿತರ ಹಂಚಿಕೆ ನೀಡಿದ ಕೂಡಲೇ ಪಡಿತರ ಚೀಟಿದಾರರ ನೊಂದಾಯಿತ ಮೊಬೈಲ್ ಸಂಖ್ಯೆಗಳಿಗೆ sms ಪಡಿತರ ಹಂಚಿಕೆ ಬಗ್ಗೆ ಸಂದೇಶ ಕಳುಹಿಸಲಾಗುತ್ತಿದೆ. 3. ಪಾಯಿಂಟ್ ಆಫ್ ಸೇಲ್(pos) ವ್ಯವಸ್ಥೆಯಡಿ ಪಡಿತರ ಚೀಟಿದಾರರ ಆಧಾರ್ ದೃಢೀಕೃತ ಬೆರಳಚ್ಚು ಪಡೆದು ಪಡಿತರ ವಿತರಣೆ ಮಾಡಲಾಗುತ್ತಿದೆ. ಪಡಿತರ ವಿತರಿಸುವಾಗ ಕಂಪ್ಯೂಟರ್‌ನಲ್ಲಿಯೂ ಆಯಾ ಕಾರ್ಡುದಾರರಿಗೆ ಹಂಚಿಕೆಯಾಗಿರುವ ಪ್ರಮಾಣ ತೋರಿಸುತ್ತದೆ. 4. ಪಡಿತರ ವಿತರಣೆಯಲ್ಲಿ ವ್ಯತ್ಯಾಸವಾದಲ್ಲಿ ಸಂಬಂಧಪಟ್ಟ ತಾಲ್ಲೂಕು ಅಥವಾ ಜಿಲ್ಲಾ ಕಛೇರಿಗೆ ದೂರು ನೀಡಬಹುದಾಗಿರುತ್ತದೆ ಮತ್ತು ಸಹಾಯವಾಣಿ ಸಂಖ್ಯೆ: 1967 ಗೆ ಕರೆ ಮಾಡಿ ದೂರು ನೀಡಬಹುದಾಗಿರುತ್ತದೆ. ನ್ಯಾಯಬೆಲೆ ಅಂಗಡಿ ಮಟ್ಟದಲ್ಲಿ ಜಾಗೃತಿ ಸಮಿತಿಗಳು ರಚನೆಯಾಗಿದ್ದು, ಕಾರ್ಯನಿರ್ವಹಿಸುತ್ತಿವೆ.
ಈ	ಕಳೆದ 3 ವರ್ಷಗಳಲ್ಲಿ ಹಾಸನ ಜಿಲ್ಲೆಯ ನ್ಯಾಯಬೆಲೆ ಅಂಗಡಿಗಳಲ್ಲಿ ಸರ್ಕಾರ ನಿಗಧಿಪಡಿಸಿರುವ ಪ್ರಮಾಣದ ದಿನಸಿ ಸಾಮಾಗ್ರಿಗಳನ್ನು ನೀಡದೆ. ಅವ್ಯವಹಾರದಲ್ಲಿ ತೊಡಗಿರುವ ಪ್ರಕರಣಗಳು ಕಂಡು ಬಂದಿದೆಯೇ; ಕಂಡುಬಂದಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಅಂಗಡಿ ಮಾಲೀಕರ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? (ಪ್ರಕರಣವಾರು ಮಾಹಿತಿ ನೀಡುವುದು)	ಹಾಸನ ಜಿಲ್ಲೆಯಲ್ಲಿ ಸರ್ಕಾರ ನಿಗಧಿಪಡಿಸಿರುವ ಪ್ರಮಾಣದ ದಿನಸಿ ಸಾಮಾಗ್ರಿಗಳನ್ನು ನೀಡದಿರುವ 10 ಪ್ರಕರಣಗಳು ಕಂಡುಬಂದಿದ್ದು, 9 ~~ನ್ಯಾಯ ಬೆಲೆ-ಅಂಗಡಿ~~ ಪ್ರಾಧಿಕಾರಗಳನ್ನು ~~ಅಮಾನತ್ತು~~ಪಡಿಸಿದ್ದು, 1 ನ್ಯಾಯಬೆಲೆ ಅಂಗಡಿಯನ್ನು ರದ್ದುಪಡಿಸಲಾಗಿದೆ. (ವಿವರವನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.)

ಆನಾಸ 18 ಆನಾಸ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.